ಕೃಷಿಕ. ಮನೆಯಲ್ಲಿ ಆಳುಕಾಳು. ಗೌಡರ ಹೆಂಡತಿ ನ್ಯಾವಸ ಸಮಸ್ಯೆಯಿಂದ ತೀರಿಹೋದ ಮೇಲೆ ಮಗ ದಾಸಪ್ಪನಿಗೆ ಕೊಡಗಿನ ಕಡೆಯಿಂದ ಹುಡುಗಿ ನೋಡಿ ಮದುವೆ ಮಾಡಿದ್ದರು. ಕೊಡಗಿನ ಹುಡುಗಿಯರು ಕೆಲಸಗಾರ್ತಿಯರು, ಆಳುಕಾಳುಗಳನ್ನು ನಿಭಾಯಿಸುವ ನಿಪುಣೆಯರು ಅನ್ನುವುದು ಮಾದಪ್ಪ ಗೌಡರ ದೂರದ ಆಲೋಚನೆ. ಹಾಗೆ ಸೊಸೆಯಾಗಿ ಬಂದವಳೇ ಕಮಲ.

ಗೌಡರ ನೆನಕೆಯಂತೇ ಕಮಲ ಎಲ್ಲವನ್ನೂ ಸುಧಾರಿಸುವಲ್ಲಿ ನಿಸ್ಸೀಮೆಯಾದಳು. ಹೊತ್ತಾರೆ ಎದ್ದು, ಕೆಲಸಕ್ಕೆ ಬರುವ ರಾಶಿ ಜನರಿಗೆ ತಿಂಡಿ ಕಾಫಿ ಮಾಡಿಟ್ಟು, ಸೆರಗು ಸೊಂಟಕ್ಕೆ ಕಟ್ಟಿ ಕೆಲಸದವರೊಂದಿಗೆ ಹೊರಟಳೆಂದರೆ ಆಳುಗಳಿಗೆ ಸುಮ್ಮಸುಮ್ಮಗೆ ವರಾತ ತೆಗೆದು ಎಲೆಯಡಿಕೆ ಸಂಚಿ ಬಿಡಿಸಿಕೊಂಡು ಕೂರಲೂ, ಉದಾಸೀನ ಮಾಡಲು ಪುರುಸೊತ್ತು ಕೊಡುತ್ತಿರಲಿಲ್ಲ. ಎಲ್ಲರ ಬಾಯಲ್ಲೂ ಕಮಲ, ಕಮಲಕ್ಕ ಆಗಿ ಮಾರ್ಪಾಟು ಹೊಂದಲು ಹೆಚ್ಚು ದಿನ ಬೇಕಾಗಲಿಲ್ಲ. ಔಷಧಿ ಸಿಂಪಡಿಸುವುದು, ಕಾಡು ಹೆರೆಯುವುದು, ಗೊಬ್ಬರ ಇಡುವುದು, ಕಾಲಕಾಲಕ್ಕೆ ಎಲ್ಲಾ ಕೆಲಸಗಳು ಕಮಲಕ್ಕನ ಅಣತಿಯಂತೆ ಸುಸೂತ್ರವಾಗಿ ನಡೆದುಬಿಡುತ್ತಿತ್ತು. ಯಾವಾಗ ಮೈದುನ ಶೀನಪ್ಪನಿಗೆ (ಸೀನ)ಮದುವೆಯಾಗಿ ಸರೋಜ ಮನೆಗೆ ಕಾಲಿಟ್ಟಳೋ ಅಲ್ಲಿಂದ ಆ ಮನೆಯಲ್ಲಿ ವ್ಯತಿರಿಕ್ತವಾದ ಬದಲಾವಣೆಗಳು ಕಾಣತೊಡಗಿದ್ದು.

ಸರೋಜ ಬಂದಾಗ ಕಮಲಕ್ಕ ಪ್ರೀತಿಯಿಂದಲೇ ಸ್ವಾಗತಿಸಿದ್ದಳು. ಇನ್ನಾದರೂ ತನ್ನ ಮೇಲೆ ಬಿದ್ದ ಹೊರೆಕೆಲಸದ ಜವಾಬ್ದಾರಿ ಸ್ವಲ್ಪವಾದರೂ ತಗ್ಗೀತೆಂಬ ತರ್ಕ ಆಕೆಯದು. ಗಂಡು ಮಕ್ಕಳು ಅಪ್ಪನಂತೆ ಅಲ್ಲ. 'ಮಾಡಿಟ್ಟದ್ದು ಇದ್ದವರಿಗೆ ಎಲ್ಲಿಲ್ಲದ ಶೋಕಿ' ಅನ್ನುವ ವರ್ಗದವರು. ಹಾಗಾಗಿ ಗಂಡ ದಾಸಪ್ಪ (ದಾಸ) ಅಷ್ಟಾಗಿ ತೋಟ-ತುಡುಗೆ ಅಂತ ನಿಗಾ ವಹಿಸುತ್ತಿರಲಿಲ್ಲ. ಬೆಳಗ್ಗೆ ತಿಂಡಿ ತಿಂದು ಬಟ್ಟೆ ಕೋಸಿ ಸುಮ್ಮಗೆ ರಾಜಿ ಪಂಚಾಯಿತಿಗೆಯ ನೆವ ಹೇಳಿಕೊಂಡು ತಿರುಗುವುದೇ ಹೆಚ್ಚು. ಇನ್ನು ಮೈದುನ ಸೀನ, ಪಕ್ಷದ ಕೆಲಸ ಅದು ಇದೂ ಅಂತ, ಮುಂದೊಮ್ಮೆ ನಾನೂ ಒಂದು ಲೀಡರ್ ಆಗಿಯೇ ತೀರುತ್ತೇನೆ ಅನ್ನುವ ಉಮೇದು ಹೊತ್ತುಕೊಂಡವ. ಬೈಕ್ ಸ್ಟಾರ್ಟ್ ಮಾಡಿ ಬೆಳಗ್ಗೆ ಹೊರಟರೆ ಬರುವುದು ಅಪರಾತ್ರಿಗೆ. ಹೀಗಿರುವಾಗ ಮನೆಯ ಸಾರಥ್ಯದ ಚುಕ್ಕಾಣಿ ಹಿಡಿದ ಕಮಲಳಿಗೆ ಸಂಸಾರ ಹಳಿ ತಪ್ಪದಂತೆ ನಿಭಾಯಿಸದೆ ವಿಧಿಯಿರಲಿಲ್ಲ.

ಅಂತಹುದರಲ್ಲಿ ಸರೋಜ ಮದುವೆಯಾಗಿ ಬಂದು ಎರಡು ತಿಂಗಳಾದರೂ ಮನೆಯಿಂದ ಆಚೆ ಮಸುಗಲಿಲ್ಲವೆಂದರೆ?

ಎಷ್ಟು ದಿನ ತಾನೇ ಕಮಲಳೂ ನೋಡಿಕೊಂಡೇ ಇದ್ದಾಳು? ಒಂದು ದಿನ, 'ಸರೂ... ಹೊಳೆ ಬದಿಗೋಗಿ ಎಲ್ಲರ ಬಟ್ಟೆ ಮನಾರ ಒಕ್ಕಂಡ್ ಬಾ' ಅಂತ ಗುಡ್ಡೆ ಹಾಕಿದ ಬಟ್ಟೆಯನ್ನು ಗಂಟುಕಟ್ಟಿ ಕೊಟ್ಟಿದ್ದಳು.

ಇಲ್ಲಿ ತನಕ ಕಮಲಳೇ ಮಧ್ಯಾಹ್ನ ಉಂಡಾಗಿ ಎಲ್ಲರೂ ಎಲಾಡಿಕೆ ಜಗಿಯುವ ಹೊತ್ತಲ್ಲಿ ಹಳ್ಳದ ಬದಿಗೆ ಓಡಿಹೋಗಿ ಎಲ್ಲವನ್ನೂ ಒಗೆದು ತರುತ್ತಿದ್ದದು. ಗಂಡಸರ ಮಣ ಭಾರದ ಪ್ಯಾಂಟ್ ದಿನಾ ಎತ್ತಿ ಬಡಿದು ತೊಳೆದು ರಟ್ಟೆಯೇ ಬಿದ್ದೋದಂತೆ ಆಗುತ್ತಿತ್ತು.

ಅದೇ ಸಮಯಕ್ಕೆ ಗುಂಡಿಮನೆ ಪದ್ದಕ್ಕ ಬಟ್ಟೆ ಒಗೆಯಲು ಬಂದವಳು ಕಮಲಕ್ಕನ ನೋಡಿ,

'ಎಂತ ಕಮಲಕ್ಕ... ಎಷ್ಟು ಕೆಲಸಾಂತ ಒಬ್ಬರೇ ಮಾಡಿರೆ... ಕಡೆಗೆ ಸೊಂಟ ಬಿದ್ದು ಹೋದರೆ ಯಾರೂ ಇರ್ದುಲೆ ನೋಡಿ! ಸರೋಜ ಮನೇಲಿ ಕುದ್ದ್ಕಂಡ್ ಎಷ್ಟ್ ಮೊಟ್ಟೆ ಹಾಕಿದೆ? ಎಲ್ಲೂ ಕಾಂಬದೇ ಇಲ್ಲೆ... ಅವ್ಳೊಟ್ಟಿಗೆ ಬಟ್ಟೆ ಒಕ್ಕಂಡ್ ಬಾತೇಳಿಕೆ ಬತ್ತಾ?, ಅವಳಾಗಿ ಕೆಲ್ಸ ಮಾಡಿಕೆ ಇಳಿಯೋದುಲೆ ತೇಳಿರೆ ನೀವಾದರು ಹೇಳಿ ಕಲ್ಸೋಕು, ಇಲ್ಲರೆ ಹಂಗೆ ಕೆಲ್ಸ ಕಲಿಯೋದು ಮತ್ತೆ' ಅಂತ ಕೇಳಿದ ಮೇಲೆಯಿಂದ ಕಮಲಕ್ಕನಿಗೆ ಅದು ಅಹುದಲ್ವಾ ಅಂತ ಅನ್ನಿಸಿದ್ದು.

ಕಾಟಾಚಾರಕ್ಕೆ ಮುಖ ದುಮುಗುಡಿಸಿಕೊಂಡು ಬಟ್ಟೆಗಂಟು ಕಟ್ಟಿಕೊಂಡು ಸರೋಜ ಹೊಳೆಬದಿಗೆ ಹೋದವಳೆ, ಸುಮ್ಮಗೆ ಶಾಸ್ತ್ರಕ್ಕೆ ಬಟ್ಟೆಯನ್ನು ಕಲ್ಲಿಗೆ ಕುಕ್ಕುತ್ತಾ, ಅಲ್ಲಿ ಬಂದವರು-ಹೋದವರೊಂದಿಗೆ ಲೋಕರೂಢಿ ಮಾತಾಡುವುದಲ್ಲಿ ಸಮಯವನ್ನೇ ಒಗೆದು ಹಾಕುತ್ತಿದ್ದಳು ಬಿಟ್ಟರೆ ಕಮಲಕ್ಕನ ಸೀರೆಯ ಮಣ್ಣಾಗಲಿ, ಭಾವ ದಾಸಪ್ಪನ ಶರ್ಟಿನ ಕಾಲಾರ್‌ನ ಕೊಳೆಯಾಗಲೀ, ಮಾವನ ಮುಂಡು ಪಂಚೆಗೆ ಅಂಟಿಕೊಂಡ ನೋವಿನೆಣ್ಣೆಯ ಕಸಂಡಾಗಲಿ ಒಂದು ದಿನವೂ ಹೋಗಿದ್ದಿಲ್ಲ. ಅವಳ ಮತ್ತು ಗಂಡ ಸೀನನ ಬಟ್ಟೆ ಮಾತ್ರ ಪ್ರತ್ಯೇಕವಾಗಿ ಘಮಗುಡುತ್ತಾ ಗಳದ ಮೇಲೆ ಗರಿಗರಿಯಾಗಿ ಒಣಗುತ್ತಿತ್ತು.